ಫಾರೆಸ್ಟ್ಸ್ ಇಲಾಖಾ.

ನೋಟಿಫಿಕೇಷ್ಯ, ತಾರೀಖು 25ನೆ ಮೇ 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಈ ಕೆಳಗೆ ನಮೂದಾಗುವ ತಪಶೀಲ್ ಮೇರಿಗೆ ಶಿವಮೊಗ್ಗ ಡಿಸ್ಟ್ರಿಕ್ಟಿಗೆ ಸೇರಿದ ಡಿಪೋಗಳಲ್ಲಿನ ಚೌಬೀನೆಗಳನ್ನು ಬಾಜೂದಲ್ಲಿ ನಮೂದಾಗುವ ತಾರೀಖುಗಳಲ್ಲಿ ಶಿವಮೊಗ್ಗ ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರವರಿಂದಾಗಲೀ ಅಥವಾ ಅವರಿಂದ ನಿಯಮಿಸಲ್ಪಟ್ಟ ಇತರೆ ಆಫಿಸರುಗಳಿಂದಾಗಲೀ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆ.

ಡಿಪೋ ಹೆಸರು.	ಸಾಗುವಾನಿ ಬೆಲಗು.		ಕಿರಿಬರು.	ಹಿಪ್ಪೆ ಬರು.	ಹರಾಜು ತಾರೀಖು.	ಷರಾ
	ನಂಬರ್.	ಸಲೆ ಅಡಿ.				
ಚನ್ನಗಿರಿ ಡಿಪೋ ...	70	300	750	250	2—6—09	
ಜೋಳದಹಾಳ ಕೂಪು IV ..	1758	4,010¼	...	...	5—6—09	...
ದಾನವಾಡಿ I ...	2214	3,008	....	....	7—6—09	
ಹೊಳೆಹೊನ್ನೂರು ಡಿಪೋ ...	101	315⅓	131	...	8—6—09	

ಹರಾಜು ಷರತ್ತುಗಳು.

ಪ್ರತಿ ಲಾಟು ತೆಗದುಕೊಂಡ ಹರಾಜುದಾರನು ಹರಾಜು ಮೊಬಲಗು ಪೈಕಿ ಕಾಲು ಹಿಸ್ಸೆ ಹಣವನ್ನು ಹರಾಜು ತಾರೀಖು ಲಾಗಾಯಿತು 3 ದಿವಸಗಳೊಳಗಾಗಿ ಸಮಿಾಪದ ಖಜಾನೆಗೆ ಜಮಾ ಮಾಡಿಸಬೇಕು. ತಪ್ಪಿದಲ್ಲಿ 2ನೆ ಹರಾಜು ಮಾಡಿಸಿ ನಷ್ಟವಾದ ಮೊಬಲಗಿಗೆ ಅವಲೆ ಹರಾಜುದಾರನಿಗೆ ಗುರಿಪಡಿಸುತ್ತೆ. ಷುರು ಹರಾಜಿಗಿಂತ ಜಾಸ್ತಿ ಹಣ ಬಂದಲ್ಲಿ ಅಂಥಾ ಹಣಕ್ಕೆ ಅವಲೆ ಹರಾಜುದಾರನು ಅರ್ಹನಲ್ಲಾ.

2. ಬಾಕೀ ಹಣವನ್ನು 1909ನೆ ಇಸವಿ ಜೂನ್ 25ರ ವಳಗಾಗಿ ಪಾವತಿ ಮಾಡಬೇಕು. ತಪ್ಪಿದಲ್ಲಿ ಷುರು ಕೊಟ್ಟ ಕಾಲು ಹಿಸ್ಸೆ ಹಣವನ್ನು ಸರಕಾರಕ್ಕೆ ಸೇರಿಸಿಕೊಳ್ಳುವದಲ್ಲದೆ ಮೇಲೆ ನಮೂದಿಸಿದಂತೆ ದುಸರಾ ಹರಾಜು ಮಾಡಿಸುತ್ತೆ.

3. ಪೂರಾ ಹಣ ಪಾವತಿ ಮಾಡಿ ಲೈಸೆನ್ಸ್ ಪಡದ ವಿನಹ ಯಾವ ಚೌಬೀನೆಯನ್ನಾಗಲಿ ರಫ್ತು ಮಾಡಿಕೊಳ್ಳಕೂಡದು.

4. ಹರಾಜಾದ ಚೌಬೀನೆಯನ್ನು ಹರಾಜು ತಾರೀಖು ಲಾಗಾಯಿತು 90 ದಿವಸಗಳೊಳಗೆ ರಫ್ತು ಮಾಡದೆ ಬಿಟ್ಟಲ್ಲಿ ಹರಾಜುದಾರು ಡಿಪೋ ಬಾಡಿಗೆಯನ್ನು ಹರಾಜು ಮೊಬಲಗಿನ ಮೇಲೆ ಸಾಲಿಯಾನ 12 ರೂಪಾಯಿನಂತೆ ಹರಾಜು ತಾರೀಖು ಲಾಗಾಯಿತು ವಸೂಲ್ ಮಾಡಲ್ಪಡುತ್ತೆ.

ಆರ್. ಟಿ. ಮಹದೇವರಾವ್,
ಫಾರ್ ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರ್, ಶಿವಮೊಗ್ಗ ಡಿಸ್ಟ್ರಿಕ್ಟು.